ತಾಲ್ಲೂಕು ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಲು ಸಾಧ್ಯವಾಗುತ್ತಿರುವುದಿಲ್ಲ ಜಿಲ್ಲೆಯಲ್ಲಿರುವ ವೈದ್ಯಕೀಯ ಮಂಡಳಿ ತಾಲ್ಲೂಕು ಮಟ್ಟದಲ್ಲಿ ಕ್ಯಾಂಪ್ ನಡೆಸಿ ವೈದ್ಯಕೀಯ ಪ್ರಮಾಣ ಪತ್ರ ನೀಡಬೇಕೆಂದು ಆರೋಗ್ಯ ಇಲಾಖೆಯನ್ನು ಕೋರಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1252(1760)
ಸದಸ್ಯರ ಹೆಸರು ಶ್ರೀ ಬಾಲರಾಜ್ ಎಸ್
(ಕೊಳ್ಳೇಗಾಲ)
ಉತ್ತರಿಸಬೇಕಾದ ಸಚಿವರು ಶ್ರೀ ಬಿ ನಾಗರಾಜ ಶೆಟ್ಟಿ
(ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಸರ್ಕಾರಿ ಮೀನುಮರಿ ಉತ್ಪಾದನಾ ಘಟಕಗಳು ಹಂತ ಹಂತವಾಗಿ ಮುಚ್ಚುತ್ತಿರುವುದಕ್ಕೆ ಕಾರಣಗಳೇನು,

ಕರ್ನಾಟಕದಲ್ಲಿರುವ ಮೀನುಮರಿ ಉತ್ಪಾದನಾ ಘಟಕಗಳನ್ನು ಮುಚ್ಚುವ ಉದ್ದೇಶವಿಲ್ಲದಿದ್ದರೂ, ಬದಲಾಗಿ ದುರಸ್ತಿ ಮತ್ತು ನೀರಿನ ಸೌಕರ್ಯಗಳನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಮೀನುಮರಿ ಉತ್ಪಾದನಾ ಪಾಲನಾ ಕೇಂದ್ರಗಳನ್ನು ಹಂತಹಂತವಾಗಿ ಸುಸ್ಥಿತಿಗೆ ತರಲಾಗುತ್ತಿದೆ

ಆ) ಮೀನುಮರಿಗೆ ತುಂಬಾ ಬೇಡಿಕೆ ಇದ್ದಾಗ್ಯೂ ಸ್ಥಗಿತ ಗೊಳಿಸಿರುವುದರಿಂದ ಸರ್ಕಾರಕ್ಕೆ ತುಂಬಾ ನಷ್ಟವಲ್ಲವೇ,

ಉದ್ಭವಿಸುವುದಿಲ್ಲ

ಇ) ಉತ್ಪಾದನಾ ಘಟಕಗಳನ್ನು ಪುನಃ ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಡಕುಗಳೇನು,

ಉದ್ಭವಿಸುವುದಿಲ್ಲ

ಈ) ಕೊಳ್ಳೇಗಾಲದ ಗುಂಡಾಲ್ ಮೀನು ಮರಿ ಉತ್ಪಾದನಾ ಘಟಕ ಪುನಃಶ್ಚೇತನಗೊಳಿಸಲಾಗುವುದೇ,

ಈ ಘಟಕಗಳನ್ನು ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿಗೆ ಗುತ್ತಿಗೆಗೆ ನೀಡಲಾಗಿದ್ದು, 2003-04ನೇ ಸಾಲಿನಲ್ಲಿ ತೀವ್ರ ಬರಗಾಲದ ಕಾರಣ ಗುಂಡಾಲ್ ಮೀನುಮರಿ ಉತ್ಪಾದನಾ ಕೇಂದ್ರಕ್ಕೆ ನೀರಿನ ಕೊರತೆ ಉಂಟಾಗಿ ಕಾರ್ಯಚಟುವಟಿಕೆ ಕುಂಠಿತವಾಗಿತ್ತು ಈಗ ಮೀನುಮರಿ ಉತ್ಪಾದನೆ, ಪಾಲನೆ ಮತ್ತು ವಿತರಣೆ ಪ್ರಮಾಣವನ್ನು ಹೆಚ್ಚಿಸಲು ಕ್ರಮವಹಿಸಲಾಗಿದೆ

ಕಳೆದ ನಾಲ್ಕು ವರ್ಷಗಳಲ್ಲಿ ಈ ಕೇಂದ್ರದಿಂದ ಸರಬರಾಜು ಮಾಡಿದ ಮೀನುಮರಿ ಪ್ರಮಾಣ ಕೆಳಕಂಡಂತಿದೆ

2003–04 – 185 ಲಕ್ಷ

2004–05 – 807 ಲಕ್ಷ

2005–06 – 1006 ಲಕ್ಷ

2006–07 – 2362 ಲಕ್ಷ

ಈ) ಇಲ್ಲವಾದಲ್ಲಿ, ಕಾರಣಗಳೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1253(1401)**
ಮಾನ್ಯ ಸದಸ್ಯರ ಹೆಸರು	**ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)**

ಅ) ಟೊಮೊಟೋ ಬೆಲೆ ಕುಸಿದಿದ್ದು, ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ರೈತರಿಗೆ ಬೆಂಬಲ ಬೆಲೆ ನಿಗದಿಪಡಿಸಲಾಗುವುದೇ?

ಉತ್ತಮ ಗುಣಮಟ್ಟದ ಟೊಮೊಟೋ ಬೆಲೆ ಕುಸಿತಕ್ಕೊಳಗಾಗಿರುವುದಿಲ್ಲ ಈ ಹಿನ್ನಲೆಯಲ್ಲಿ ಟೊಮ್ಯಾಟೋವನ್ನು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಲ್ಲಿ ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ

ಆ) ಅವಶ್ಯಕತೆ ಇರುವ ಸ್ಥಳದಲ್ಲಿ ಶೈತ್ಯಾಗಾರವನ್ನು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಪ್ರಸ್ತುತ ಇರುವುದಿಲ್ಲ